# ಚಂದನವನದ ಯುವರಾಣಿ

**‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾ ಮೂಲಕ ಚಂದನವನದಲ್ಲಿ ಹೊಸ ಹೂವಾಗಿ ಅರಳಿರುವ ನಟಿ ಅಂಕಿತಾ ಅಮರ್ ಅವರಿಗೆ ತಮ್ಮ ಪಾತ್ರಗಳ ಮೂಲಕ ನವರಸಗಳನ್ನೂ ಅನ್ವೇಷಿಸುವ, ಅಭಿವ್ಯಕ್ತಪಡಿಸುವ ಹಂಬಲ. ‘ಜಸ್ಟ್ ಮ್ಯಾರೀಡ್’, ‘ಸತ್ಯ ಸನ್ ಆಫ್ ಹರಿಶ್ಚಂದ್ರ’ ಸಿನಿಮಾದಲ್ಲಿಯೂ ಅವರು ನಟಿಸುತ್ತಿದ್ದಾರೆ.**

**■ ಸುಮಲತಾ ಎನ್.**

‘ಮೀರಾ, ಅನಾಹಿತಾ, ಸಹನಾ, ಗಾನ... ಪ್ರತಿ ಪಾತ್ರದಲ್ಲೂ ಒಂದು ಕಥೆಯಿದೆ. ಪ್ರತಿ ಪಾತ್ರವೂ ಒಂದೊಂದು ಭಾವವನ್ನು ಗಟ್ಟಿಯಾಗಿ ಪ್ರತಿನಿಧಿಸುತ್ತದೆ. ಒಂದೊಂದು ರೀತಿಯ ಜೀವನವನ್ನು ತೆರೆದಿಡುತ್ತಾ ಹೋಗುತ್ತದೆ. ನನಗೆ ಬಹು ಭಾವಗಳನ್ನು ಅಥವಾ ನವರಸಗಳನ್ನು ಮುಟ್ಟುವಂಥ ಪಾತ್ರಗಳನ್ನು ನಿಭಾಯಿಸಬೇಕೆನ್ನುವ ಆಸೆ. ಯಾವುದೇ ಪಾತ್ರಕ್ಕೆ ಪೋಷಣೆ ಮಾಡುವಂಥ ಸಾಮರ್ಥ್ಯ ನನಗಿದೆ ಎನಿಸಿದರೆ ಅಂಥ ಪಾತ್ರವನ್ನು ತುಂಬಾ ಪ್ರೀತಿಯಿಂದ ಮಾಡುತ್ತೇನೆ...’

ಈಚೆಗೆ ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿ ನಟಿಸಿರುವ, ಆ ಸಿನಿಮಾಗೆ ದೊರೆತಿರುವ ಸ್ಪಂದನಕ್ಕೆ ಪುಳಕಿತರಾಗಿರುವ ನಟಿ ಅಂಕಿತಾ ಅಮರ್, ಸದ್ಯ ಸಿನಿಮಾರಂಗದ ಹೊಸ ಹಾದಿಯಲ್ಲಿದ್ದಾರೆ.

‘ನಮ್ಮನೆ ಯುವರಾಣಿ’ ಧಾರಾವಾಹಿಯಲ್ಲಿ ಮೀರಾ ಆಗಿ ಮನೆಮಾತಾಗಿದ್ದ ಅವರು ನಟನೆ– ನಿರೂಪಣೆ–ಸಂಗೀತ– ನೃತ್ಯ, ಹೀಗೆ ಬಹು ಕಲಾಪ್ರಕಾರಗಳಲ್ಲಿ ಕಿರುತೆರೆಯಲ್ಲಿ ಮಿಂಚಿದವರು. ‘ಇಬ್ಬನಿ ತಬ್ಬಿದ ಇಳೆಯಲಿ’ ಮೂಲಕ ಕಿರುತೆರೆಯಿಂದ ಹಿರಿತೆರೆಗೆ ಪ್ರವೇಶಿಸಿ ಈಗ ಮತ್ತೆರಡು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ಸಿನಿಮಾ ಎಂದರೆ ಅದು ಜೀವನದ ಕಥೆಗಳು ಎನ್ನುವ ಅಂಕಿತಾ, ವಾಸ್ತವ ಜೀವನವನ್ನು ತೆರೆದಿಡುವ ಪ್ರಕಾರಗಳ ಸಿನಿಮಾಗಳು ತಮ್ಮ ಹೃದಯಕ್ಕೆ ಹತ್ತಿರವಾಗುತ್ತವೆ ಎನ್ನುತ್ತಾರೆ. ಸಿನಿಮಾ ನೋಡುವಾಗ ನೋಡುಗರ ಮನಸ್ಸಿನಲ್ಲಿ ಒಂದು ಭಾವನೆ ಹುಟ್ಟಿಕೊಂಡರೆ ಸಿನಿಮಾ ಮಾಡಿದ್ದಕ್ಕೂ ಸಾರ್ಥಕ ಎನ್ನುವುದು ಅವರ ಭಾವನೆ.

‘ಒಂದು ಸಿನಿಮಾ ಅವಕಾಶ ನನ್ನ ಬಳಿ ಬಂದರೆ, ಆ ಪಾತ್ರದ ಪರಿಚಯ ನೋಡುತ್ತೇನೆ. ಆ ಪಾತ್ರವನ್ನು ಪೋಷಣೆ ಮಾಡಲು ನನ್ನಿಂದ ಸಾಧ್ಯವಾಗುತ್ತದೆ ಎಂದು ಅನ್ನಿಸಿದರೆ ಮಾತ್ರ ಅದನ್ನು ಕೈಗೆತ್ತಿಕೊಳ್ಳುತ್ತೇನೆ. ಪಾತ್ರಕ್ಕೆ ನಾನು ಸೂಕ್ತವಿದ್ದೇನಾ, ಆ ಪಾತ್ರಕ್ಕೆ ನ್ಯಾಯ ಕೊಡಲು ಸಾಧ್ಯವಾ ಎನ್ನುವುದು ನನ್ನ ಮೊದಲ ಮಾಪನ. ಜೊತೆಗೆ, ನನ್ನದೇ ಒಂದು ಚೌಕಟ್ಟಿದೆ. ಪಾತ್ರದಲ್ಲಿ ನಾನೇ ಕಂಫರ್ಟಬಲ್ ಇರುವುದಿಲ್ಲ ಎಂಬ ಆಲೋಚನೆ ಬಂದರೆ ಅದನ್ನು ಮಾಡಲು ಹೋಗುವುದಿಲ್ಲ. ನನಗೆ ಅನುಗುಣವಾಗಿ ನನ್ನ ಚೌಕಟ್ಟಿನಲ್ಲಿ ಕೆಲಸ ಮಾಡಲು ಅಚ್ಚುಕಟ್ಟಾದ ಪಾತ್ರ ಸಿಕ್ಕರೆ ಖಂಡಿತ ಸಂತೋಷದಿಂದ ಮಾಡುತ್ತೇನೆ’ ಎಂದು ನಗುತ್ತಾರೆ.

ರಾಜಕುಮಾರ್, ಶಂಕರ್ ನಾಗ್ ಅವರ ಸಿನಿಮಾಗಳನ್ನು ನೋಡಿ ಬೆಳೆದ ಅಂಕಿತಾ ಅವರಿಗೆ, ದೊಡ್ಡವರಂತೆಯೇ, ತಮಗೆ ಸಿಕ್ಕ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂಬ ತುಡಿತವಿದೆ. ‘ಸಿನಿಮಾ ಎನ್ನುವುದು ಮನರಂಜನೆಯಾದರೂ ಸಾಮಾಜಿಕ ಕಾಳಜಿಯೂ ಇರಬೇಕು’ ಎನ್ನುತ್ತಲೇ, ತಾವು ಒಂದು ಪಾತ್ರವನ್ನು ಒಪ್ಪಿಕೊಳ್ಳುವ ಮುನ್ನ ಯಾವುದೇ ಕಾರಣಕ್ಕೂ ಆ ಪಾತ್ರ ಮಕ್ಕಳ ಮೇಲೆ ಯಾವುದೇ ರೀತಿ ಕೆಟ್ಟ ಪರಿಣಾಮ ಬೀರಬಾರದು ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಮುಂದುವರೆಯುವುದಾಗಿ ಹೇಳುತ್ತಾರೆ. ಸದ್ಯ ‘ಮಕ್ಕಳ ಮನೋವಿಜ್ಞಾನ’ ವಿಷಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಅವರು.

ನಟನೆಗೆ ಬಂದಿದ್ದು ಆಕಸ್ಮಿಕವಾದರೂ ಸಿನಿಮಾರಂಗದಲ್ಲಿ ಹೆಚ್ಚೆಚ್ಚು ತೊಡಗಿಕೊಳ್ಳಬೇಕು, ಒಳ್ಳೆಯ ಪಾತ್ರಗಳ ಮೂಲಕ ಸೇವೆ ಸಲ್ಲಿಸಬೇಕು ಎಂಬ ಗಟ್ಟಿಯಾದ ಆಸೆಯೊಂದು ಈಗೀಗ ಶುರುವಾಗಿದೆ ಎಂದೂ ಹೇಳುತ್ತಾರೆ.

